**2** ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ**.,**ರವರ ನ್ಯಾಯಾಲಯ**,** ಕಡೂರು**.**

<u>ಸಿ.ಸಿ.ನಂ.**997/2022**</u>

ದಿನಾಂಕಃ **29-12-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

| | | |
|---|---|---|
| ಸಾಕ್ಷಿಯ ಹೆಸರು ಃ | ಹರೀಶ್ ಆರ್. | ಚಾಸಾ-11, ಪ್ರಾಸ-9 |
| ಗಂಡನ ಹೆಸರು ಃ | ರಾಮಾನಾಯ್ಕ | |
| ವಯಸ್ಸು ಃ | 37 ವರ್ಷ | |
| ಉದ್ಯೋಗ ಃ | ಉಪ ನಿರೀಕ್ಷಕರು | |
| ವಾಸ ಃ | ಗಂಗೊಳ್ಳಿ, ಉಡುಪಿ ಜಿಲ್ಲೆ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು 25.08.2020 ರಿಂದ 05.05.2022 ವರೆಗೆ  ಸಖರಾಯಪಟ್ಟಣ  ಠಾಣೆಯಲ್ಲಿ ಆರಕ್ಷಕ ಉಪ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ04.05.2022 ರಂದು ಈ ಪ್ರಕರಣ ಕಡತವನ್ನು ಚಾಸಾ-10 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಈಗಾಗಲೇ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳ ಮಹಜರ್, ವಾಹನದ ಆರ್.ಸಿ. ಮಾಲೀಕರಿಗೆ ಕಲಂ 133 ಐಎಂವಿ ಕಾಯ್ದೆಯಡಿಯಲ್ಲಿ ನೋಟೀಸು ನೀಡಿ ಉತ್ತರವನ್ನು ಪಡೆದುಕೊಂಡಿದ್ದು, ಹಾಗೂ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿರುತ್ತಾರೆ. ಚಾಸಾ-1 ರವರ ಗಾಯದ ದೃಡೀಕರಣ  ಪತ್ರ ಬರಲು ಬಾಕಿ ಇದ್ದು, ದಿನಾಂಕಃ 04.05.2022 ರಂದು ಚಾಸಾ-8 ರವರು ಗಾಯದ ದೃಡೀಕರಣ ಪತ್ರವನ್ನು ಪರಿಶೀಲಿಸಿ ನೋಡಲಾಗಿ ಚಾಸಾ-1 ರವರಿಗೆ ಆದ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿದ್ದು, 1 ನೇ ಆರೋಪಿಯಾದ ರಂಜಿತನ ಮೇಲೆ ಕಲಂ 279, 338 ಐಪಿಸಿ ಮತ್ತು 2 ನೇ ಆರೋಪಿಯ ಮೇಲೆ ವಾಹನಕ್ಕೆ ವಿಮೆ ಮಾಡಿಸದೇ ಇರುವ ಕಾರಣ ಐಎಂವಿ ಕಲಂ  196 ರಂತೆ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.  ಈಗಾಗಲೇ ನಿಪಿ-6 ರಂತೆ ಗುರುತಿಸಲಾದ ಗಾಯದ ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿತರ ಪರ  ಶ್ರೀ.ಬಿ.ಆರ್**.,** ವಕೀಲರಿಂದಃ</u>

ನಿಪಿ-1 ರ ದೂರಿನಲ್ಲಿ ನಿರ್ದಿಷ್ಟವಾಗಿ ಇಂತದ್ದೆ  ಸ್ಥಳದಲ್ಲಿ ಕೃತ್ಯ ನಡೆದಿದೆ ಎಂದು ನಮೂದು ಮಾಡಿಲ್ಲ. ನಿಪಿ-2 ರ ಮಹಜರ್ನಲ್ಲಿ ಚಕ್ಕುಬಂದಿ ದಾಖಲಾಗಿರುತ್ತದೆ. ನಿಪಿ-1 ರ ದೂರಿನಲ್ಲಿ ನಿಪಿ-2 ರಲ್ಲಿ ಬರೆದಿರುವ ಚಕ್ಕುಬಂದಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-6 ರ ಗಾಯದ ಪ್ರಮಾಣ ಪತ್ರವನ್ನು ಠಾಣಾ ಸಿಬ್ಬಂದಿಯವರು ನನಗೆ ನೀಡಿರುತ್ತಾರೆ. ನಿಪಿ-6 ರಲ್ಲಿ ಯಾವುದೇ ರೆಫರೆನ್ಸ್ ಇರಲಿಲ್ಲ ಎಂದರೆ ಸಾಕ್ಷಿಯು ಆಸ್ಪತ್ರೆಯ ಸೀಲು ಇರುತ್ತದೆ ಎಂದು ನುಡಿಯುತ್ತಾರೆ. ಪಿರ್ಯಾದಿಯೊಂದಿಗೆ ಶರೀಕಾರಿ ಅವನಿಗೆ ಪರಿಹಾರ ದೊರಕಿಸಲು ಸಹಾಯ ಮಾಡುವ ಉದ್ದೇಶಂದ ನಿಪಿ-6 ನ್ನು ಸೃಷ್ಟಿಸಿರುತ್ತೇನೆ ಎಂದರೆ

ಸರಿಯಲ್ಲ. ಯಾವುದೇ ಅಪಘಾತ ನಡೆಯದೇ ಇದ್ದರೂ ಆರೋಪಿತರ ವಿರುದ್ಧ ದಾಖಲಿಸಿದ ಪ್ರಥಮ ವರ್ತಮಾನ ವರದಿಯನ್ನು ಸಮರ್ಥಿಸುವ ಸಲುವಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.